# ಜಯ ಮಂಗಳಂ - ವಾನರೇಂದ್ರನ

**Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao

ರಾಗ: ಮುಖಾರಿ ತಾಳ: ಅಟ

ಜಯ ಮಂಗಳಂ ನಿತ್ಯ ಶುಭ ಮಂಗಳಂ || ಪ ||

ವಾನರೇಂದ್ರನ ರೂಪವ ತಾಳಿದ
ವನಧಿಯ ದಾಟಿ ಜಾನಕಿಗುಂಗುರವಿತ್ತ
ದಾನವೇಂದ್ರನ ವನವನೆಲ್ಲವ ಕಿತ್ತು ಪಟ್ಟಣವನೆ ಸುಟ್ಟು
ಇನಕುಲದ ರಾಮಗೆರಗಿದ್ದ ಹನುಮಂತಗೆ || 1 ||

ದುಷ್ಟ ದುರ್ಯೋಧನನ ಮಡುಹಿ
ಜ್ಯೇಷ್ಠಗೆ ಪಟ್ಟಗಟ್ಟಿ ಅವನಿಯೊಳು ಮೆರೆದವನಿಗೆ
ದುಷ್ಟ ರಾಯರನೆಲ್ಲ ಮಡುಹಿದಖಿಳೇಶ್ವರನ
ಕೃಷ್ಣಗತಿ ಪ್ರಿಯನಾದ ಭೀಮಸೇನಗೆ || 2 ||

ಯತಿ ರೂಪವ ತಾಳಿ ಶ್ರುತಿ ಶಾಸ್ತ್ರದಿಂ ಶ್ರೀ-
ಪತಿಯು ಸರ್ವೋತ್ತಮನೆಂದೆನಿಸಿದವಗೆ
ಯತಿ ವೇದವ್ಯಾಸನಾದ ಪುರಂದರ ವಿಠಲನ್ನ
ಗತಿ ಮಾರ್ಗವ ತೋರಿದ ಮಧ್ವ ಮುನಿಗೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ವನಧಿಯ** – ಸಮುದ್ರವನ್ನು.

**ದಾನವೇಂದ್ರನ** – ರಾವಣನ.

**ಇನಕುಲದ** – ಸೂರ್ಯವಂಶದ.

**ಮಡುಹಿ –** ಸೆಣಸಿ ಸೋಲಿಸಿ.

**ಜ್ಯೇಷ್ಠಗೆ –** ತನ್ನ ಅಣ್ಣನಾದ ಯುಧಿಷ್ಠಿರನಿಗೆ.

**ಗತಿ ಮಾರ್ಗವ –** ಹೊಂದುವ ದಾರಿಯನ್ನು. ಗತಿ ಎಂದರೆ ಮೋಕ್ಷವೂ ಆಗುತ್ತದೆ.

**Classification:** Keerthane
**Ankita:** purandara vittala
**Location:** NA
**Category:** Hanuma Stuti, madhwacharya stuti, mangala song
**Sub-Category:** hanuma, mangala, madhva, madhwacharya, hanuma-bhima-madhva, bhima, veda, mukti, muni, shastra, sripati, bhumi, pandava, kourava, ravana, sita, Samudra, kaadu, rama,
**Pravachana:** NA
**Explanation:** NA